ಓ.ಎಸ್ಃ184/15

ಡಿಡಬ್ಲ್ಯೂಃ 1

<u>ದಿನಾಂಕಃ **06-12-2019** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀ ಆರ್.ಎನ್.ಡಿ. ವಕೀಲರಿಂದಃ</u>

ನಾನು ಕಳೆದ 12 ವರ್ಷಗಳಿಂದ ಕಲಬುರ್ಗಿಯಲ್ಲಿ ವಾಸವಾಗಿರುತ್ತೇನೆ. ಈ ದಾವೆಯನ್ನು ನಾನು 3 ಮನೆಗಳ ಮೇಲೆ ಮತ್ತು 4 ಜಮಿನುಗಳ ಮೇಲೆ ಸಲ್ಲಿಸಿರುತ್ತೇನೆ. ಆ ಜಮಿನುಗಳ ಸರ್ವೆ ನಂ. 220/2, 224/1, 94/4, 94/5 ಅಂತಾ 4 ಜಮಿನುಗಳು ಇರುತ್ತವೆ. ಜಮಿನು ಸರ್ವೆ ನಂ. 94/1 ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿ. ಜಮಿನು ಸರ್ವೆ ನಂ. 94/1 ರಲ್ಲಿ ನನ್ನದು ಪಾಲು ಇರುವುದಿಲ್ಲ ಎಂದರೆ ಸರಿ. ಪ್ರತಿಯೊಂದು ಜಮಿನಿನ ಚತುರಸೀಮೆ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ. 94/4 ರ 8 ಗುಂಟೆ ಜಮಿನು ಇರುತ್ತದೆ. ಸರ್ವೆ ನಂ. 224 ರ 1 ಎಕರೆ 10 ಗುಂಟೆ ಜಮಿನು ಇರುತ್ತದೆ. ಸರ್ವೆ ನಂ. 220 ರ 4 ಎಕರೆ 18 ಗುಂಟೆ ಜಮಿನು ಇರುತ್ತದೆ. 4 ಮನೆಗಳು ಉದ್ದ ಮತ್ತು ಅಗಲ ನನಗೆ ಹೇಳಲು ಬರುವುದಿಲ್ಲ. ಆ 4 ಮನೆಗಳು ಚತುರಸೀಮೆ ನನಗೆ ಗೊತ್ತಿರುವುದಿಲ್ಲ. ದಾವಾ ಮನೆಗಳು 3 ಇರುತ್ತವೆ. 3 ಮನೆಗಳ ಎಷ್ಟು ತಲಬಾಗಿಲು ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಮನೆ ನಂ. 3/51, 3/52, 3/49/2 ಅಂತಾ ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತವೆ. ದಾವೆಯಲ್ಲಿ ಮನೆಗಳ ನಂಬರ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬೇರೆ ನಂಬರ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಕಾಳಮ್ಮ, ಭೀಮಾಬಾಯಿ, ಶುಕಲಾದೇವಿ, ನಾಗಮ್ಮ ಎಂದು ಸಹೋದರಿಯರು ಇರುತ್ತಾರೆ ಎಂದರೆ ಸರಿ. ಕಾಳಮ್ಮಳು ಮೃತಪಟ್ಟಿರುತ್ತಾರೆ ಆಕೆಳೆ ಪಂಡಿತ, ಆದಿಶೇಷ ಮತ್ತು ಉತ್ತಣ್ಣ ಎಂದು ಮಕ್ಕಳು ಇರುತ್ತಾರೆ. ಪಂಡಿತ, ಆದಿಶೇಷ ಮತ್ತು ಉತ್ತಣ್ಣ ಭೀಮಾಬಾಯಿ, ಶುಕಲಾದೇವಿ, ನಾಗಮ್ಮ ಅವರು ಜೀವಂತ ಇರುತ್ತಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಅವರೂ ಸಹ ಈ ದಾವೆಗೆ ಅವಶ್ಯಕ ಪಕ್ಷಗಾರರು ಇರುತ್ತಾರೆ ಎಂದರೆ ಸರಿಯಲ್ಲ.

2013 ರ ಉಗಾದಿ ಹಬ್ಬದಂದು ನಮ್ಮ ಮತ್ತು ಪ್ರತಿವಾದಿಯರ ಪಂಡಿತ, ಆದಿಶೇಷ ಮತ್ತು ಉತ್ತಣ್ಣ ಭೀಮಾಬಾಯಿ, ಶುಕಲಾದೇವಿ, ನಾಗಮ್ಮ ಅವರ ನಡುವೆ ಬಾಯಿಮಾತಿನ ಮುಖಾಂತರ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯು ಸರಕಾರಿ ನೌಕರ ಇದ್ದರು ಎಂದರೆ ಸರಿ. ನನ್ನ ತಂದೆಯ ಅನುಕಂಪದ ಆಧಾರದ ಮೇಲಿನ ನೌಕರಿ ನನಗೆ ಸಿಕ್ಕಿರುತ್ತದೆ. ಆ ಪಾಲು ವಿಭಾಗದಲ್ಲಿ 3 ಲಕ್ಷ ರೂ 5 ತೊಲೆ ಬಂಗಾರವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಪಾಲು ವಿಭಾಗದಲ್ಲಿ 220/2 ರ 4 ಎಕರೆ 18 ಗುಂಟೆ ಜಮಿನು ಮತ್ತು 3-51 ರ ನಾಯ್ಕಲನಲ್ಲಿ ಇರುವ

ಆಸ್ತಿಗಳು 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಜಮಿನು ಸರ್ವೆ ನಂ. 224/1 ರ 1 ಎಕರೆ 10 ಗುಂಟೆ ಜಮಿನು ಮತ್ತು 3-52 ರ 2 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಜಮಿನು ಸರ್ವೆ ನಂ. 94/5 ರ 8 ಗುಂಟೆ , 94/1 10 ಗುಂಟೆ ಜಮಿನು ಮತ್ತು 3-49/2 ರ ಮನೆ 3 ನೇ ಪ್ರತಿವಾದಿಗೆ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಪಾಲು ವಿಭಾಗದಲ್ಲಿ ನನಗೂ ನನ್ನ ತಾಯಿ 1 ನೇ ವಾದಿಗೂ ಹಾಗೂ ಕುಟುಂಬದ ಎಲ್ಲ ಹೆಣ್ಣು ಮಕ್ಕಳಿಗೂ 5 ತೊಲೆ ಮತ್ತು 3 ಲಕ್ಷ ರೂ. ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಾಲು ವಿಭಾಗದಲ್ಲಿ ಹಣ ಮತ್ತು ಬಂಗಾರವನ್ನು ಪಡೆದುಕೊಂಡಿದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲಿ 1 ನೇ ವಾದಿ ಮತ್ತು ಕುಟುಂಬದ ಹೆಣ್ಣು ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಶಹಾಪೂರ .